ದಿನಾಂಕಃ 20.02.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ಎನ್ ಆರ್ ವಾದಿಗಳ ಪರ ವಕೀಲರಿಂದಃ</u> ಮಹೇಶಪ್ಪ ಮತ್ತು ಸಿದ್ದಪ್ಪ ಇವರು ನಾವು ಹೇಳುವಂತೆ ಪಾಲು ವಿಭಾಗ ಮಾಡಿಕೊಂಡ ನಂತರ ಅಸ್ತಿಗಳ ಖಾತೆ ಬದಲಾವಣೆ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಮಹೇಶಪ್ಪ ಒಬ್ಬನೇ ಚೆನ್ನಬಸಪ್ಪನ ಮಗನಾಗಿದ್ದು, ಪ್ರತಿವಾದಿ 21 ಮತ್ತು ಗಂಗಮ್ಮ ಇವರು ಚೆನ್ನಬಸಪ್ಪನ ಮಕ್ಕಳಲ್ಲ ಅಂದರೆ ಸರಿಯಲ್ಲ, ಚೆನ್ನಬಸಪ್ಪನಿಗೆ ಮೂವರು ಮಕ್ಕಳು. ಪ್ರತಿವಾದಿ 21 ಮತ್ತು ಗಂಗಮ್ಮ ಇವರು ಚೆನ್ನಬಸಪ್ಪನ ಮಕ್ಕಳು ಅಲ್ಲ ಆದ್ದರಿಂದ ಅವರು ವಾದಿಯೊಂದಿಗೆ ನಿಲವಂಜಿ ಮತ್ತು ಪೃಥ್ವೇಶ್ವರ ಗ್ರಾಮದ ಅಸ್ತಿಗಳನ್ನು ವಿಭಾಗ ಮಾಡಿಕೊಂಡಿಲ್ಲ ಅಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಪಾಲು ವಿಭಾಗ ಆಗಿಲ್ಲ ಆದ್ದರಿಂದ ಯಾವುದೇ ದಾಖಲೆಗಳು ಅಸ್ತಿತ್ವದಲಿಲ್ಲ ಅಂದರೆ ಸರಿಯಲ್ಲ.

3. ಚೆನ್ನಬಸಪ್ಪ ಇವರನ್ನು ನಾನು ನೋಡಿದ್ದೆನು. ಅವರು ಯಾವಾಗ ತೀರಿಕೊಂಡರು ಅನ್ನುವುದು ಗೊತ್ತಿಲ್ಲ. ಮಹೇಶಪ್ಪ ಮತ್ತು ಸಿದ್ದಪ್ಪ ಏಕಕುಟುಂಬದವರಲ್ಲ ಅಂದರೆ ಸರಿಯಲ್ಲ. ವಾದಿ ಮತ್ತು ಅವರ ಮಕ್ಕಳು ಹಾಗೂ ಪ್ರತಿವಾದಿ 21 ಮತ್ತು ಅವರ ಮಕ್ಕಳು ವಾಸಿಸುತ್ತಿದ್ದ ಮನೆಯ ಸಂಖ್ಯೆ ಗೊತ್ತಿಲ್ಲ. ನಿಲವಂಜಿ ಗ್ರಾಮದಲ್ಲಿ ಮಹೇಶಪ್ಪನಿಗೆ ಗ್ರಾಮಪಂಚಾಯತಿಯಿಂದ ನಿವೇಶನ ಸಂಖ್ಯೆ 154/ಎ ನೀಡುವವರೆಗೆ ಚಂದ್ರಮ್ಮನಿಗೆ ಬೇರೆ ಮನೆ ಇರಲಿಲ್ಲ ಅಂದರೆ ಸರಿಯಲ್ಲ. ಚಂದ್ರಮ್ಮನಿಗೆ ಸೇರಿದ ಮನೆ ಸಂಖ್ಯೆ ಮತ್ತು ದಾಖಲೆ ನೋಡಿಲ್ಲ.

4. ಪ್ರತಿವಾದಿ 21 ಮತ್ತು ಅವರ ಮಗನ ಹೇಳಿಕೆ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಹುಣಸಿಕಟ್ಟೆ ಬಸಪ್ಪ ತಂದೆ ಗುರುಬಸಪ್ಪ ನಮ್ಮ ಊರಿನವರು ಅಂದರೆ ಸರಿ. ಹುಣಸಿಕಟ್ಟೆ ಬಸಪ್ಪನ ಸೊಸೆ ದೇವಕ್ಕ ಅಂದರೆ ಸರಿಯಲ್ಲ. ಪ್ರತಿವಾದಿ 21 ರವರ ಪತ್ನಿಯ ಹೆಸರು ದೇವಕ್ಕ. ಹುಣಸಿಕಟ್ಟೆ ಬಸಪ್ಪ ಸುಮಾರು 20-25

ಡಿಡಬ್ಲ್ಯೂ-4
ಓ ಎಸ್ 42/2014

ವರ್ಷಗಳ ಹಿಂದೆ ತೀರಿಕೊಂಡಿರಬಹುದು. ಜೋಳದಕೂಡ್ಲಿಗಿ ಮತ್ತು ಹುಣಸಿಕಟ್ಟೆ ಇವು ಬೇರೆ ಬೇರೆ ಗ್ರಾಮಗಳು ಮತ್ತು ಬೇರೆ ಬೇರೆ ಮನೆತನಗಳು ಅಂದರೆ ಸರಿ. ಅವರವರ ಮನೆತನದವರು ಅವರವರ ಮನೆಗಳಲ್ಲಿ ವಾಸಿಸುತ್ತಿದ್ದಾರೆ ಅಂದರೆ ಸರಿ. ಪ್ರತಿವಾದಿ 21 ರವರ ಪತ್ನಿ ದೇವಕ್ಕ ಇವರ ಹೆಸರಿಗೆ ಹುಣಸಿಕಟ್ಟೆ ಬಸಪ್ಪ ಮರಣಶಾಸನ ಬರೆಸಿರುವ ವಿಚಾರ ನನಗೆ ಗೊತ್ತು. ದೇವಕ್ಕ ಹುಣಸಿಕಟ್ಟೆ ಬಸಪ್ಪನ ಸೊಸೆ ಅಂದರೆ ಸರಿಯಲ್ಲ. ಪ್ರತಿವಾದಿ 21 ಅಥವಾ ಅವರ ಮಗನ ಪರವಾಗಿ ಹರಪನಹಳ್ಳಿ ನ್ಯಾಯಾಲಯದಲ್ಲಿ ನಾನು ಸಾಕ್ಷ್ಯ ನುಡಿದಿಲ್ಲ. ಚೆನ್ನಬಸಪ್ಪನಿಗೆ ಮಹೇಶಪ್ಪ ಮಾತ್ರ ಒಬ್ಬನೇ ಮಗ ಆದರೆ ಪ್ರತಿವಾದಿ 21 ಮತ್ತು ಗಂಗಮ್ಮ ಸಹ ಮಕ್ಕಳು ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.